# ಲಕ್ಕಿಫೆಲೊ ತಲೆಗೆ ನೈಜೀರಿಯಾ ಟೋಪಿ!

"ನಿಮ್ಹತ್ರ ಸ್ವಲ್ಪ ಮಾತಾಡ್ಬೇಕಿತ್ತು ಸಾರ್. ಯಾವಾಗ ಬರಲಿ? ವಿಷಯ ಸೀಕ್ರೆಟ್ಟು, ಸೀರಿಯಸ್ಸು..." – ಹೀಗೆಲ್ಲ ಪೀಠಿಕೆ ಹಾಕಿ ಉತ್ಸಾಹದಿಂದ ಎದುರಿಗೆ ಬಂದು ಕೂತಿದ್ದ ಮೋಹನ್ ರಾಮ್ ಹೇಳಿದ್ದು ಕೇಳಿ ವಿಪರೀತ ಸಿಟ್ಟು ಬಂದಿತ್ತು. ಆತನ ಮೇಲೆ "ನಿಮ್ಮನ್ನ ಬುದ್ಧಿವಂತ ಅಂದ್ಕೊಂಡಿದ್ದೆ. ನಿಮ್ ತಲೆಯಲ್ಲಿ ಬುದ್ಧೀನೆ ಇಲ್ವಲ್ರಿ!" ಎಂದು ರೇಗಾಡಿದಾಗ ಈ ಘಟನೆ ನೆನಪಿಗೆ ಬಂದಿತ್ತು.

ಗೋಣೀಚೀಲ: ಕಳೆದ ಏಪ್ರಿಲ್ ಕೊನೇವಾರ ಅಂತ ನೆನಪು. ಬೆಳಗಿನ ಝಾವದ ಹೊತ್ತು. ತುಮಕೂರು ಜಿಲ್ಲೆ ಯಡಿಯೂರು ಸಮೀಪದ ತೋಟದ ಮನೆಯಲ್ಲಿ ವಾಸವಿರುವ ನಾಗರಾಜ್ ಮನೆ ಮುಂದೆ ಒಂದು ಹಳೆ ಅಂಬಾಸಡರ್ ಕಾರಿನಲ್ಲಿ ನಾಲ್ಕು ಜನ ಊರಿಂದ ಬಂದಿಳಿದಿದ್ದರು. ಅವರ ಮುಖಗಳಲ್ಲಿ ಉನ್ಮಾದ, ಉದ್ವೇಗ, ಸಂಭ್ರಮ ತುಂಬಿ ತುಳುಕಾಡುತ್ತಿತ್ತು. ಈ ನಾಗರಾಜ್ ಮೂಲತಃ ಕಾಸರಗೋಡಿನವರು. ಬೇರೆಯವರ ಹಣಕ್ಕೆ ಆಸೆಪಡದೆ ಬದುಕುತ್ತಿರುವ ಸಜ್ಜನ. ಹಾಗೆ ಅವರ ಮನೆ ಮುಂದೆ ಅವಸರವಸರವಾಗಿ ಬಂದಿಳಿದಿದ್ದವರು ಅವರ ಸಂಬಂಧೀಕರು. ಕಾಫಿ ಕುಡಿಯುವಷ್ಟೂ ಅವರಿಗೆ ಪುರುಸೊತ್ತು ಇರಲಿಲ್ಲವೊ, ಏನೊ! ಚಿಕ್ಕಪ್ಪನ ಮಗ ಶ್ರೀಕಾಂತ ಅವರನ್ನು ಪಕ್ಕಕ್ಕೆ ಕರೆದು ಗುಟ್ಟು ಹೇಳುವವನಂತೆ ಏಳೆಂಟು ಖಾಲಿ ಗೋಣೀಚೀಲ ಬೇಕೆಂದು ಪಿಸುಗುಟ್ಟಿದಂತೆ ಕೇಳಿದ್ದ. ಯಾಕೆಂದು ಕೇಳಿದರೆ ಉತ್ತರವಿಲ್ಲ. ಗೋಣೀಚೀಲಕ್ಕಾಗಿಯೆ ಬಂದಿದ್ದರೆನಿಸುತ್ತದೆ. ಹುಡುಕಿ ತಂದು ಕೊಟ್ಟ ತಕ್ಷಣ ಪುನಃ ಬರುವುದಾಗಿ ಹೇಳಿ ಹೊರಟಿದ್ದರು.

ಮೆಸೇಜು: ನಾಗರಾಜ್ ಅವರಿಗೆ ಇವರ ವರ್ತನೆ ವಿಚಿತ್ರ ಎನಿಸಿತ್ತು. ಯಾವುದೊ ಅನುಮಾನಾಸ್ಪದ ಕೆಲಸಕ್ಕೆ ಕೈಹಾಕಿದ್ದಾರೆನಿಸಿ, ಒಂದು ಕಡೆ ಸಂಶಯ. ಇನ್ನೊಂದು ಕಡೆ ಕುತೂಹಲ. ಶ್ರೀಕಾಂತ ತನ್ನಿಂದ ಏನೊ ಮುಚ್ಚಿಡುತ್ತಿದ್ದಾನೆ ಎನಿಸಿತ್ತು. ಹಾಗಾಗಿ ಅವನಿಗೆ ಫೋನು ಮಾಡಿದರೆ ಪ್ರಯೋಜನವಿಲ್ಲ. ತಡೆಯಲಾರದೆ ಆತನ ಹೆಂಡತಿಯ ಮೊಬೈಲಿಗೆ ಫೋನು ಹಚ್ಚಿ ವಿಚಾರಿಸಿದರು. ಅವಳೊ! ಇವರಷ್ಟೆ ಸಂಭ್ರಮದಿಂದ ಹಿಗ್ಗಿಹೋಗಿದ್ದಳು. "ಮನೆಯವ್ರು ಯಾರಿಗೂ ಹೇಳಬಾರದು ಎಂದಿದ್ದಾರೆ ನಾಗಣ್ಣ. ಆ ವಿಷಯ ಕೇಳಬೇಡಿ, ಆಯಿತೊ?" ಎಂದು ಹೇಳಿದ ಆಕೆ ಮೊದಮೊದಲು ನಖರಾ ಮಾಡಿದಳಾದರೂ ಈ ನಾಗಣ್ಣ ಬಿಡಬೇಕಲ್ಲ! "ನಾನೇನು ನಿನಗೆ ಶತ್ರುವೊ?" ಎಂದು ವಿಶ್ವಾಸ ಮೂಡಿಸುವುದರ ಜೊತೆಗೆ ಯಾರಿಗೂ ಹೇಳುವುದಿಲ್ಲವೆಂದು ಪ್ರಾಮಿಸ್ಸು ಮಾಡಿದ್ದರು. ಆ ಹೆಂಗಸಿನ ಬಾಯಲ್ಲಿ ಸ್ತ್ರೀಸಹಜ ಗುಣದಂತೆ  ಗುಟ್ಟು ಉಳಿಯಲಿಲ್ಲ. ಯಾರಿಗೂ ಹೇಳಬಾರದೆಂದು ಗಂಡ ಹೇಳಿದ್ದ ರಹಸ್ಯವನ್ನು ಆಕೆ ಬಾಯಿಬಿಟ್ಟಿದ್ದಳು. ಅದೇನೆಂದರೆ–

Your mobile number had won first prise of 10,00,000 million US Dollars ಎನ್ನುವಂಥ ಎಸ್ಸೆಮ್ಮೆಸ್ ಎಂದಾದರೂ ನಿಮಗೂ ಬಂದಿದ್ದಿರಬಹುದು. ಗ್ರಹಚಾರ ನೋಡಿ! ಇಂಥದ್ದೆ ಮೆಸೇಜು ಈ ಕತೆಯಲ್ಲಿ ಬರುವ ಶ್ರೀಕಾಂತನ ಇನಬಾಕ್ಸಿಗೂ ಬಂದು ಬಿದ್ದಿತ್ತು. ಮೊದಮೊದಲು ಅವನೂ ಇದನ್ನು ನಂಬಿರಲಿಲ್ಲ. ಇದೆಲ್ಲ ಮೋಸ, ಇಂಥ ಮೆಸೇಜುಗಳನ್ನು ಮೊದಲು ಡಿಲೀಟ್ ಮಾಡಿಬಿಡಬೇಕು ಎಂದು ಯಾರೊ ಹೇಳಿದ್ದು ನೆನಪಾಗಿತ್ತು.

ಲಕ್ಕಿ ಫೆಲೊ: ಆದರೆ ಇವನದೊಂದು ಸಮಸ್ಯೆ ಇದೆ. ಮೊದಲು ಬೇರೆಯವರ ಸಲಹೆಯನ್ನು ಇವನು ಜರೂರಾಗಿ ಕೇಳುತ್ತಾನೆ. ನಂತರ ತನ್ನ ಏಳ್ಗೆಯನ್ನು ಸಹಿಸದ ಜನ ಹೀಗೆಲ್ಲ ಹೇಳುತ್ತಾರೆಂದು ಭಾವಿಸಿಕೊಂಡು ಸಲಹೆ ಕೊಟ್ಟವರನ್ನು ಜರಿಯುತ್ತಾ ಸ್ವಂತ ಬುದ್ಧಿಗೆ ತೋಚಿದಂತೆ ಮಾಡುತ್ತಾನೆ. ಇದು ಇವನ ಸ್ವಭಾವ. ಈ ಪ್ರಕರಣದಲ್ಲಿ ಅವನು ಮಾಡಿದ್ದೂ ಹೀಗೆಯೆ! ಅಂದರೆ ಮಿಲಿಯನೇರ್ ಆಗುವ ಈ ಅವಕಾಶವನ್ನು ಖಂಡಿತ ಕಳಕೊಳ್ಳಬಾರದೆಂದು ತೀರ್ಮಾನಿಸಿ ಮೆಸೇಜಿನಲ್ಲಿದ್ದ ನಂಬರ್ ಡಯಲ್ ಮಾಡಿದ್ದ. ಅತ್ತಲಿಂದ ಮಾತನಾಡಿದ್ದ ಆಸಾಮಿ "ಕಂಗ್ರಾಟ್ಸ್" ಎಂದಿತ್ತು. Come for a meeting in Bangalore, and collect your prize money gentleman! ಎಂದಿತ್ತು. ಮಿಲಿಯನ್ ಡಾಲರ್.

ಅಂದರೆ ಐದು ಕೋಟಿ ರೂಪಾಯಿಗೂ ಹೆಚ್ಚು! ಶ್ರೀಕಾಂತನಿಗೊ, ಹಾರ್ಟ್ ಫೇಲ್ ಆಗುವುದೊಂದು ಬಾಕಿ!
ಅದು ಬೆಂಗಳೂರಿನ ಐಶಾರಾಮಿ ಲೀಲಾ ಪ್ಯಾಲೇಸ್ ಹೋಟೆಲ್. ರಿಸಿಪ್ಶನ್ ಎದುರಿದ್ದ ಲಾಂಜಿನಲ್ಲಿ ಕಾಸರಗೋಡಿನ ಅಡಿಕೆ ಬೆಳೆಗಾರ ಶ್ರೀಕಾಂತ ಬಂದು ಕೂತು ಕಾತರದಿಂದ ಕಾಯುತ್ತಿದ್ದಾನೆ. "ಏಳ್ಗೆ ಸಹಿಸದ" ಯಾರಿಗೂ ವಿಷಯ ತಿಳಿಸದೆ ಹೆಂಡತಿಗೆ ಮಾತ್ರ ತಾನು ಮಿಲಿಯನೇರ್ ಆಗುತ್ತಿರುವ ವಿಷಯ ತಿಳಿಸಿ ಬಂದಿದ್ದಾನೆ. ಅರ್ಧ-ಮುಕ್ಕಾಲು ಘಂಟೆ ಕಾದೂ ಕಾದೂ ಬೇಸತ್ತ ನಂತರ ಟಾರಿನಷ್ಟೆ ಕಪ್ಪಗಿದ್ದ ಆಫ್ರಿಕಾದ ನೀಗ್ರೋವೊಬ್ಬ ಬಂದು ಕರೆಯುತ್ತಾನೆ- "ಆರ್ ಯೂ ಮಿಸ್ಟರ್ ಶಿರಕ್ಯಾಂತ್? ಪ್ಲೀಸ್ ಕಂ ವಿಥ್ ಮಿ, ಯೂ ಲಕ್ಕಿ ಫೆಲೊ"
ಕ್ಲೀನ್ ಬೋಲ್ಡ್: ಆ ಪಂಚತಾರಾ ಹೋಟೆಲಿನ ಐಶಾರಾಮಿ ಕೋಣೆಯಲ್ಲಿ ಅವನಂತೆಯೆ ಏಳಡಿ ಎತ್ತರಕ್ಕಿದ್ದ ಮೂರ್ನಾಲ್ಕು ಜನ ಕಪ್ಪು ಧಾಂಡಿಗರು ನಮ್ಮ "ಲಕ್ಕಿ ಫೆಲೊ ಶಿರಿಕ್ಯಾಂಟನನ್ನು" ಎದುರಿಗೆ ಕೂರಿಸಿಕೊಂಡಿದ್ದಾರೆ. ಅವರ ಪೈಕಿ ಮುಖ್ಯವಾದವನನ್ನು ಜಾನ್ ಮೊಬುಬೂ ಎಂದು ಪರಿಚಯಿಸಲಾಗಿತ್ತು. ಅವನು ಸದರಿ "ಶಿರಿಕ್ಯಾಂಟನಿಗೆ" ಸೊಪ್ಪುಕಟ್ಟಲು ಶುರುಮಾಡಿಬಿಟ್ಟ ನೋಡಿ! ಇವನಿಗೆ ಸಾಧ್ಯವಾದಷ್ಟು ಅರ್ಥವೂ ಆಯಿತು. ಅದರ ತಾತ್ಪರ್ಯ ಇದು-
"ಇದು ಅಮೇರಿಕ ಸರ್ಕಾರದ ಲಾಟರಿ. ಪ್ರಪಂಚದಲ್ಲಿರುವ ಎಲ್ಲಾ ಮೊಬೈಲ್ ನಂಬರುಗಳನ್ನು ಹಾಕಿ ಲಾಟರಿ ಎತ್ತಿದಾಗ ನಿಮ್ಮ ನಂಬರಿಗೆ ಒಂದು ಮಿಲಿಯನ್ ಅಮೇರಿಕನ್ ಡಾಲರ್ ಪ್ರೈಜು ಬಂದಿದೆ. ಅಂದರೆ ನೀವು ಈಗ ಮಿಲಿಯನೇರ್! ನಿಮ್ಮನ್ನು ಹುಡುಕಿ ಪ್ರೈಜು ಕೊಟ್ಟು ಬರುವ ಕೆಲಸವನ್ನು ಅಮೇರಿಕಾ ಸರ್ಕಾರ ನಮಗೆ ವಹಿಸಿದೆ. ನಾವು ಇಂಟರ್ನ್ಯಾಷನಲ್ ಅಸೋಷಿಯೇಶನ್ ಆಫ್ ಮಿಲಿಯನೇರ್ಸ್ ಟ್ರೆಜರಿಯ ಸೆಕ್ರೆಟರಿ"
ಇದನ್ನು ಕೇಳಿ ಶಿರಿಕ್ಯಾಂಟ್ ಕ್ಲೀನ್ ಬೋಲ್ಡ್!
ಆಲ್ ರೈಟ್: "ಆದರೆ ಒಂದು ಕಂಡಿಶನ್ ಇದೆ. ಅದನ್ನು ನನ್ನ ಅಸಿಸ್ಟೆಂಟ್ ನಿಮಗೆ ಹೇಳಿದ್ದಾನೆ. ಆದರೂ ನಾನು ಪುನಃ ನೆನಪು ಮಾಡುತ್ತೇನೆ. ಸರ್ವೀಸ್ ಛಾರ್ಜ್ ಮತ್ತು ಟ್ಯಾಕ್ಸ್ ಸೇರಿ ಒಟ್ಟು 50 ಲಕ್ಷ ಇಂಡಿಯನ್ ರೂಪಾಯಿಗಳನ್ನು ನಮ್ಮ ಟ್ರೆಜರಿಗೆ ಕಟ್ಟಬೇಕು"
ಇವನು ಅಷ್ಟೊಂದು ಹಣ ಇಲ್ಲವೆಂದು ಚೌಕಾಶಿಗೆ ಇಳಿದಿದ್ದ- "ಟ್ವೆಂಟಿ ಫೈವ್ ಲ್ಯಾಕ್ಸ್ ಐ ಕ್ಯಾನ್ ಅರೆಂಜ್"
ಜಾನ್ ಮೊಬುಬೂ ಅದಕ್ಕೂ ಒಂದು ಉಪಾಯ ಹೇಳಿದ್ದ- "ನೊ ಪ್ರಾಬ್ಲಮ್! ಪ್ರೈಜ್ ಮನಿ ಕೂಡ ಅರ್ಧ ಮಿಲಿಯನ್ ನಿಮಗೆ ಸಿಗುತ್ತೆ. ಐದು ಲಕ್ಷ ಡಾಲರ್ ಅಂದರೆ ಎರಡೂವರೆ ಕೋಟಿ. ಓಕೆ?"
ಇಪ್ಪತ್ತೈದು ಲಕ್ಷ ಉಳಿಸಲು ನೋಡಿದರೆ ಎರಡೂವರೆ ಕೋಟಿ ಕಳಕೊಳ್ಳಬೇಕಾಗುತ್ತದೆಂದು ಇದರ ಅರ್ಥ. ಇವನಿಗೆ ಪೆಚಾಟಕ್ಕಿಟ್ಟುಕೊಂಡಿತ್ತು. ಅರ್ಧ ಅದೃಷ್ಟವನ್ನು ಕಳಕೊಳ್ಳಬಾರದೆಂದು ನಮ್ಮ ಮಿಲಿಯನೇರ್ ನಿರ್ಧರಿಸಿಬಿಟ್ಟಿದ್ದ. ಹೇಗೂ 30 ಲಕ್ಷಕ್ಕೆ ತೋಟ ಮಾರಲು ತೀರ್ಮಾನಿಸಿ ಐದು ಲಕ್ಷ ಹಣವನ್ನೂ ತಂದಾಗಿದೆ. ಉಳಿದ 20 ಲಕ್ಷವನ್ನು ಪ್ರೈಜ್ ಹಣದಲ್ಲಿ ವಜಾ ಮಾಡಿಕೊಳ್ಳಲು ಹೇಳಬಹುದಲ್ಲ? ಒಳ್ಳೆ ಐಡಿಯಾ! ಎನಿಸಿತ್ತು. ಅದನ್ನೆ ಇಬುಬೂ ಮುಂದೆ ರಿಕ್ವೆಷ್ಟು ಮಾಡಿಕೊಂಡಿದ್ದ. ಅವರಲ್ಲೆ ಒಂದೈದು ನಿಮಿಷ ಈ ವಿಷಯದಲ್ಲಿ ಇವನಿಗೆ ಅರ್ಥವಾಗದ ಭಾಷೆಯಲ್ಲಿ ಚರ್ಚೆ ನಡೆದು ಕಡೆಗೊಮ್ಮೆ ಅವನು "ಆಲ್ ರೈಟ್" ಎಂದಿದ್ದ. ಅಡ್ವಾನ್ಸ್ ಎಂದು ಹಳೆ ಪೇಪರಿನಲ್ಲಿ ಸುತ್ತಿ ತಂದಿದ್ದ ಐದು ಲಕ್ಷ ಕೊಡಲು ಮುಂದಾದಾಗ ಹಾಳಾದ ಇಬುಬೂ "ನೋ.." ಎಂದುಬಿಡುವುದೆ! ಯಾಕಿರಬಹುದೆಂದು ಅವನತ್ತ ನೋಡಿದಾಗ ಅವನು ಹೇಳಿದ್ದು ಇದು- "ನೀವು ಟ್ರಜರಿಗೆ ಕಟ್ಟಬೇಕಾದ ಹಣವನ್ನು ನನಗ್ಯಾಕೆ ಕೊಡ್ತೀರಿ? ಬ್ಯಾಂಕಿಗೆ ಹೋಗಿ ನಾವು ಕೊಟ್ಟಿರೊ ನಂಬರಿನ ಅಕೌಂಟಿಗೆ ತುಂಬಿ. ನೀವೀಗ ಮಿಲಿಯನೇರ್ ಅನ್ನೋದು ಮರೀಬೇಡಿ. ವ್ಯವಹಾರವನ್ನು ದಾಖಲೆಯಿಲ್ಲದೆ ಕ್ಯಾಶ್ ಟ್ರಾನ್ಸಾಕ್ಷನ್ ಮಾಡಬೇಡಿ ಮಿ.ಶಿರಿಕ್ಯಾಂಟ್!
ತೋಟ ಮಾರಾಟ: ಈ ಮಾತು ಕೇಳಿದ ಶ್ರೀಕಾಂತ್ ಫುಲ್ ಫಿದಾ. ಅವನಲ್ಲಿ ಇವರ ಬಗೆಗಿದ್ದ ಅಲ್ಪ ಪ್ರಮಾಣದ ಸಂಶಯವೂ ಬಸಿದು ಹೋಗಿ ಸಂಪೂರ್ಣ ನಂಬಿಕೆ ಬಂದುಬಿಟ್ಟಿತ್ತು. ಅವರ ಪೈಕಿಯಲ್ಲಿ

ಘಡವನಂತಿದ್ದ ಒಬ್ಬನ ಜೊತೆ ಹೋಗಿ ಹತ್ತಿರದಲ್ಲಿದ್ದ ಬ್ಯಾಂಕಿನಲ್ಲಿ ಹಣ ತುಂಬಿಸಿ ಬಂದಾಗ ಜಾನ್ ಮೊಬುಬೂ ಇವನ ಕೈಗೆ ಗೌರವಪೂರ್ವಕ ಕೊಟ್ಟಿದ್ದು Certificate of authenticity. ಜೊತೆಗೆ ಒಂದು ಮಿಲಿಯನ್ ಡಾಲರ್ ನೋಟಿನ ನಕಲು. ಪೂರ್ತಿಹಣ ಸಂದಾಯವಾದ ತಕ್ಷಣ ಒಂದು ಮಿಲಿಯನ್ ಡಾಲರ್, ಅಂದರೆ ಐದು ಕೋಟಿ ರುಪಾಯಿ ಅವನಿಗೆ ಸಿಗುತ್ತೆ ಎನ್ನುವುದಕ್ಕೆ ಇದು ಗ್ಯಾರಂಟಿ.
ಇದನ್ನು ಕೈಲಿ ಹಿಡಿದವನೆ ಶಿರಿಕ್ಯಾಂಟ್ ಎನ್ನುವ ಸದರಿ ಲಕ್ಕಿ ಫೆಲೊ ಸೀದಾ ಊರಿಗೆ ಬಂದು ಮಾಡಿದ ಮೊದಲ ಕೆಲಸವೇನು ಗೊತ್ತೆ? ಐವತ್ತು ಲಕ್ಷ ಬಾಳುತ್ತಿದ್ದ ತೋಟವನ್ನು ತುರ್ತಿಗೆ ಬಿದ್ದು ಮೂವತ್ತು ಲಕ್ಷಕ್ಕೆ ಮಾರಿದ್ದನಲ್ಲ! ಕೊಂಡವನ ಎದೆಯ ಮೇಲೆ ಕೂತು ಆಸ್ತಿ ರಿಜಿಸ್ಟರ್ ಮಾಡಿಕೊಟ್ಟು ಉಳಿದ ಇಪ್ಪತ್ತೈದು ಲಕ್ಷ ತಂದಿದ್ದು. ತರಾತುರಿಯಿಂದ ಮೂರುಜನ ಸಂಬಂಧೀಕರನ್ನು ಕರಕೊಂಡು ಹಣದೊಂದಿಗೆ ಬೆಂಗಳೂರಿನತ್ತ ಹೊರಟಿದ್ದು.
ಒಂದಲ್ಲ, ಎರಡಲ್ಲ. ಅವನ ಕೈ ಸೇರಲಿರುವುದು ಬರೋಬ್ಬರಿ ಐದು ಕೋಟಿ ರೂಪಾಯಿ! ಅದನ್ನು ತರುವಾಗ ಯಾರಿಗೂ ಅನುಮಾನ ಬರಬಾರದೆಂದು ಹಳೆ ಅಂಬಾಸಡರ್ ಕಾರು ತಂದಿದ್ದ. "ಆದರೆ ಅಷ್ಟೊಂದು ಹಣವನ್ನು ತುಂಬಿಕೊಳ್ಳುವುದು ಯಾವುದರಲ್ಲಿ?" ಎಂದು ಜೊತೆಗಿದ್ದ ಒಬ್ಬ ಸಂಬಂಧೀಕ ಕೇಳಿದ್ದ. ದೊಡ್ಡ ಸೂಟುಕೇಸುಗಳನ್ನು ಬೆಂಗಳೂರಿನಲ್ಲಿ ಖರೀದಿಸಿದರಾಯಿತು ಎಂದಿದ್ದಕ್ಕೆ ಅವನು "ಅನುಮಾನ ಬಂದು ಯಾರಾದರೂ ಡಕಾಯಿತಿ ಮಾಡಿಬಿಡೋದು ಗ್ಯಾರಂಟಿ" ಎಂದುಬಿಟ್ಟ. ಆಗ ಇವರೆಲ್ಲ ಸೇರಿ ಅರ್ಧದಾರಿಯಲ್ಲಿ ನಿರ್ಧರಿಸಿದ್ದು ಹಣವನ್ನು ಹಳೆ ಗೋಣಿಚೀಲಗಳಲ್ಲಿ ತುಂಬಿಕೊಂಡು ತರಬೇಕೆಂದು. ಪರಿಣಾಮವಾಗಿಯೆ ಇವರ ಕಾರು ಯಡಿಯೂರಿನ ಹತ್ತಿರವಿರುವ ತಮ್ಮದೆ ಬಳಗದ ನಾಗರಾಜ್ ತೋಟಕ್ಕೆ ಬಂದಿದ್ದು, ನಾಗರಾಜ್ ಬಯ್ಯುತ್ತಾರೆನ್ನುವ ಕಾರಣಕ್ಕೆ ವಿಷಯ ಮುಚ್ಚಿಟ್ಟಿದ್ದು, ಖಾಲಿ ಗೋಣಿಚೀಲ ಸಿಕ್ಕಿದ ತಕ್ಷಣ ಹೊರಟಿದ್ದು.
ಪರಾರಿ: ಇಷ್ಟಾಯಿತಲ್ಲ! ಮಧ್ಯಾಹ್ನದ ಹೊತ್ತಿಗೆ ಆ ಕಾರು ತೀರಾ ಸೋತಂತೆ ಬಂದು ಮನೆಯೆದುರು ನಿಂತಿತ್ತು. ಅದರಿಂದ ಇಳಿದವರ ಮುಖಗಳು ಕಳೆಗುಂದಿದ್ದವು. ಅಲ್ಲಿ ವಿಷಾದ ತುಂಬಿಕೊಂಡಿತ್ತು. ಮೈಕೈಗೆಲ್ಲ ತರಚು ಗಾಯ. ಏನಾಯ್ತೆಂದು ಕೇಳಿದಾಗ ತಿಳಿದುಬಂದಿದ್ದು– ಈ ಸಲ ಜಾನ್ ಮೊಬುಬೂ ಲೀಲಾ ಪ್ಯಾಲೇಸಿಗೆ ಬರಲು ಹೇಳಲಿಲ್ಲ. ಬದಲಿಗೆ ನೇರವಾಗಿ ಆ ದಿನ ಹಣ ಕಟ್ಟಿದ ಬ್ಯಾಂಕಿಗೆ ಬರಲು ಹೇಳಿದ್ದ. ಹಳೆ ಅಂಬಾಸಡರ್ ಕಾರಿನಿಂದ ಇಳಿದವರಿಂದ ಖುದ್ದು ತಾನೆ ನಿಂತು ಬ್ಯಾಂಕಿನ ಖಾತೆಗೆ ಹಣ ತುಂಬಿಸಿದ್ದ. ಹಣ ತುಂಬಿಸಿ ಹೊರಬರುವಷ್ಟರಲ್ಲಿ ಮೊಬುಬೂ ಎನ್ನುವ ಪ್ರೈಜು ಕೊಡುವವನು ಕಾಣಿಸಲಿಲ್ಲ. ಅತ್ತಿತ್ತ ನೋಡಿದಾಗ ಬ್ಯಾಂಕ್ ಪಕ್ಕದ ಗಲ್ಲಿಯಲ್ಲಿ ಬಿರುಸಾಗಿ ನಡೆದು ನಾಪತ್ತೆಯಾಗುವ ಯತ್ನದಲ್ಲಿರುವುದು ಕಾಣಿಸಿತ್ತು. ಇವರೂ ಬಿಡಲಿಲ್ಲ. ಅಟ್ಟಿಸಿಕೊಂಡು ಹೋದರು. ಅವನೂ ಓಡತೊಡಗಿದ್ದ. ಒಂದಷ್ಟು ದೂರದಲ್ಲಿ ನಿರ್ಜನ ಜಾಗ. ಓದುತ್ತಿದ್ದವನು ಅಲ್ಲಿ ಓಟ ನಿಲ್ಲಿಸಿ, ಹತ್ತಿರ ಬರುವಂತೆ ಕರೆದಿದ್ದ. ಹತ್ತಿರ ಹೋಗಿ ಹಿಡಿಯಲು ಯತ್ನಿಸಿದವರಿಗೆ ಯಾವ ಪರಿ ಬಾರಿಸಿದ್ದನೆಂದರೆ ಇವರು ಉದುರಿಬಿದ್ದು ಮೈಕೈಗೆಲ್ಲ ಗಾಯ ಮಾಡಿಕೊಳ್ಳುವಷ್ಟು. ಹಾಗೆ ಚೆನ್ನಾಗಿ ಬಾರಿಸಿದಮೇಲೆ ಅವನು ಏನೂ ಆಗಿಯೆ ಇಲ್ಲವೇನೊ ಎನ್ನುವಂತೆ ನಡೆದು ಹೋಗಿ ಆಟೊ ಹತ್ತಿದ್ದ. ಇದೆಂಥ ದುರಂತ ನೋಡಿ! ಶ್ರೀಕಾಂತ ಎನ್ನುವ ಅದೃಷ್ಟವಂತ ಆಸ್ತಿಮಾರಿ ಹಣ ಕೊಟ್ಟಿದ್ದೂ ಅಲ್ಲದೆ ಒದೆ ತಿಂದಿದ್ದೂ ಆಗಿತ್ತು. ಇದು ಪಬ್ಲಿಕ್ ಆಗಿ ಮರ್ಯಾದೆ ಹೋಗುತ್ತದೆನ್ನುವ ಭಯದಿಂದ ಅವನು ಪೊಲೀಸರಿಗೆ ದೂರನ್ನೂ ಕೊಡಲಿಲ್ಲ.
ಪಂಚರ್: ಇಂಥ ವಂಚನೆ ಪ್ರಕರಣಗಳನ್ನು Nigerian scam ಎನ್ನುತ್ತಾರೆ. ಅಂದರೆ ನೈಜೀರಿಯಾ ಟೋಪಿ. ಆಫ್ರಿಕಾ ಖಂಡದ ನೈಜೀರಿಯಾ, ಐವರಿ ಕೋಸ್ಟ್ ಮುಂತಾದ ದೇಶಗಳಲ್ಲಿ ಮುಗ್ಧರು ಇರುವಂತೆಯೆ ಇಂಥ ಹುಟ್ಟಾ ವಂಚಕರೂ ಇದ್ದಾರೆ. ಅವರು ಇಲ್ಲೀವರೆಗೆ ಬಂದು ಮೊಬೈಲು, ಇಂಟರ್ನೆಟ್ಟು ಬಳಸಿಕೊಂಡು ಶ್ರೀಕಾಂತನಂಥ ಬಕರಾಗಳಿಗೆ ಸುಣ್ಣ ತಿಕ್ಕಿ ಹೋಗುತ್ತಾರೆ. ಪಾಪ, ಇಂಥವರು ನಾಮ ತೀಡಿಸಿಕೊಂಡು ಬಾಯಿಮುಚ್ಚಿ ಕೂರುತ್ತಾರೆ.
ಇದನ್ನೆಲ್ಲಾ ಹೇಳಿದಾಗ ನನ್ನೆದುರಿಗೆ ಬಂದು "ಸೀಕ್ರೆಟ್ಟಾದ ಮತ್ತು ಸೀರಿಯಸ್ಸಾದ" ವಿಷಯ ಮಾತಾಡಲು ಕೂತಿದ್ದ ಮೋಹನರಾಮ್ ಪಂಚರ್ ಆಗಿಹೋಗಿದ್ದನೆಂದರೆ ನಂಬಿ! ಮಿಲಿಯನೇರ್ ಆಗುವ ದುರಾಸೆಗೆ ಬಿದ್ದು ಅವನಾಗಲೆ ಐದು ಲಕ್ಷ ಕೊಟ್ಟು Certificate of authenticity ಎನ್ನುವ ಕಾಗದದ ತುಕುಡಾ

ತಂದಾಗಿತ್ತು. ಅದನ್ನು ಕಿತ್ತಿಟ್ಟುಕೊಂಡು ಕಳಿಸಿದ್ದೆ. ಇಲ್ಲಿ ಅಚ್ಚು ಮಾಡಿರುವುದು ಸಾಕ್ಷಾತ್ತು ಅವನಿಂದ ಕಿತ್ತು ಎತ್ತಿಟ್ಟುಕೊಂಡಿರುವ ಆ ಕಾಗದದ ತುಣುಕೇ!

******

Intro

ಒಂದಲ್ಲ, ಎರಡಲ್ಲ. ಅವನ ಕೈ ಸೇರಲಿರುವುದು ಬರೋಬ್ಬರಿ ಐದು ಕೋಟಿ ರೂಪಾಯಿ! ಅದನ್ನು ತರುವಾಗ ಯಾರಿಗೂ ಅನುಮಾನ ಬರಬಾರದೆಂದು ಹಳೆ ಅಂಬಾಸಡರ್ ಕಾರು ತಂದಿದ್ದ. "ಆದರೆ ಅಷ್ಟೊಂದು ಹಣವನ್ನು ತುಂಬಿಕೊಳ್ಳುವುದು ಯಾವುದರಲ್ಲಿ?" ಎಂದು ಜೊತೆಗಿದ್ದ ಒಬ್ಬ ಸಂಬಂಧೀಕ ಕೇಳಿದ್ದ. ದೊಡ್ಡ ಸೂಟುಕೇಸುಗಳನ್ನು ಬೆಂಗಳೂರಿನಲ್ಲಿ ಖರೀದಿಸಿದರಾಯಿತು ಎಂದಿದ್ದಕ್ಕೆ ಅವನು "ಅನುಮಾನ ಬಂದು ಯಾರಾದರೂ ಡಕಾಯಿತಿ ಮಾಡಿಬಿಡೋದು ಗ್ಯಾರಂಟಿ" ಎಂದುಬಿಟ್ಟ?